11	ಚಿಕ್ಕಮಗಳೂರು	155
12	ಮಂಗಳೂರು (ದ.ಕ.ಜಲ್ಲೆ)	394
13	ಉಡುಪಿ	64
14	ಚಾಮರಾಜನಗರ	128
15	ಮಡಿಕೇರಿ (ಕೊಡಗು)	19
16	ಗುಲ್ಬರ್ಗಾ	387
17	ಬಿಜಾಪುರ	1499
18	ಬಾಗಲಕೋಟೆ	1133
19	ಬಳ್ಳಾರಿ	732
20	ರಾಯಚೂರು	333
21	ಧಾರವಾಡ	927
22	ಗದಗ	305
23	ಹಾವೇರಿ	212
24	ಕಾರವಾರ (ಉ.ಕ.ಜಿಲ್ಲೆ)	214
25	ಕೊಪ್ಪಳ	194
26	ಬೆಳಗಾವಿ	1196
27	ಬೀದರ್	344
28	ರಾಮನಗರ	102
29	ಚಿಕ್ಕಬಳ್ಳಾಪುರ	40
30	ಹೊರನಾಡು	20
	ಒಟ್ಟು	**17060**

ರಾಜ್ಯದಲ್ಲಿರುವ E.S.I. ಆಸ್ಪತ್ರೆಗಳ ಸ್ಥಿತಿಗತಿಗಳು

390 (927) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಕಾರ್ಮಿಕ ವಿಮಾ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಅವು ಯಾವ ಯಾವ ಜಿಲ್ಲೆಗಳಲ್ಲಿವೆ; (ವಿವರ ನೀಡುವುದು)

(ಅ) ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ (ಇಎಸ್‌ಐ) ಆಸ್ಪತ್ರೆಗಳು ಸ್ಥಾಪಿತವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿಲ್ಲದಿದ್ದಲ್ಲಿ ಹಾಲಿ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ಇದಕ್ಕಾಗಿ ಹಣವನ್ನು ಕಾಯ್ದಿರಿಸಲಾಗಿದೆಯೇ;

(ಈ) ಕೇಂದ್ರ ಸರ್ಕಾರ ಈ ಆಸ್ಪತ್ರೆಗಳ ಅಭಿವೃದ್ಧಿಗೆ ಬಿಡುಗಡೆ ಮಾಡುತ್ತಿರುವ ಅನುದಾನದ ಮೊತ್ತವೆಷ್ಟು? (ವಿವರ ನೀಡುವುದು)

ಶ್ರೀ ಬಿ.ಎನ್.ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

(ಅ) ಕಾರಾವಿ ಯೋಜನೆ ಆಸ್ಪತ್ರೆಗಳ ಸಂ: 07 ಕಾರಾವಿ ನಿಗಮದ ಆಸ್ಪತ್ರೆ ಸಂ: 01

ಕ್ರ.ಸಂ.	ಜಿಲ್ಲೆ	ಹೆಸರು	ಹಾಸಿಗೆ ಸಾಮರ್ಥ್ಯ
1	ಬೆಂಗಳೂರು	ಇಂದಿರಾನಗರ	300
		ರಾಜಾಜಿನಗರ	500
2	ಮೈಸೂರು	ಮೈಸೂರು	100
3	ದಕ್ಷಿಣ ಕನ್ನಡ	ಮಂಗಳೂರು	100
4	ದಾವಣಗೆರೆ	ದಾವಣಗೆರೆ	50
5	ಧಾರವಾಡ	ಹುಬ್ಬಳ್ಳಿ	50
6	ಬೆಳಗಾವಿ	ಬೆಳಗಾವಿ	50
7	ಉತ್ತರ ಕನ್ನಡ	ದಾಂಡೇಲಿ	25

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 45,398 ವಿಮಾದಾರರಿಗೆ 01 ಆಸ್ಪತ್ರೆ ಹಾಗೂ 09 ಕಾರಾವಿ ಚಿಕಿತ್ಸಾಲಯಗಳ ಮುಖಾಂತರ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಿ, ಆಸ್ಪತ್ರೆ/ ಚಿಕಿತ್ಸಾಲಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

(ಇ) ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆಸ್ಪತ್ರೆಯಲ್ಲಿ ಖಾಲಿಯಿರುವ ತಜ್ಞ ವೈದ್ಯಾಧಿಕಾರಿಗಳ ಪೈಕಿ 08 ಅಂಶಕಾಲಿಕ ತಜ್ಞರನ್ನು ಹಾಗೂ 08 ತಜ್ಞ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಆಸ್ಪತ್ರೆಗೆ ಅಗತ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುವುದು.

(ಈ) ಕೇಂದ್ರ ಸರ್ಕಾರದಿಂದ ಆಸ್ಪತ್ರೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ.

ಕಾರಾವಿ ನಿಗಮವು ನೇರವಾಗಿ ಆಸ್ಪತ್ರೆಗಳ ನವೀಕರಣ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

ಕ್ರ.ಸಂ.	ವಿವರ	ಕಾರಾವಿ ನಿಗಮವು ನವೀಕರಣಕ್ಕಾಗಿ ನಿಗದಿಪಡಿಸಿದ ಮೊತ್ತ
1.	ಕಾರಾವಿ ಆಸ್ಪತ್ರೆ ಮೈಸೂರು.	` 25.40 ಕೋಟಿ
2.	ಕಾರಾವಿ ಆಸ್ಪತ್ರೆ, ದಾವಣಗೆರೆ	` 24.20 ಕೋಟಿ
3.	ಕಾರಾವಿ ಆಸ್ಪತ್ರೆ ಹುಬ್ಬಳ್ಳಿ.	` 24.49 ಕೋಟಿ
4.	ಕಾರಾವಿ ಆಸ್ಪತ್ರೆ, ದಾಂಡೇಲಿ.	` 01.89 ಕೋಟಿ
5.	ಕಾರಾವಿ ಆಸ್ಪತ್ರೆ, ಇಂದಿರಾನಗರ (ನರ್ಸಿಂಗ್ ಕಾಲೇಜ್ ಹಾಗೂ ಆಡಿಟೋರಿಯಂ)	` 82.00 ಕೋಟಿ
6.	ಗುಲ್ಬರ್ಗಾದಲ್ಲಿ ವೈದ್ಯಕೀಯ ಕಾಲೇಜು ಮತ್ತು ಪ್ಯಾರಾ ಮೆಡಿಕಲ್ ಕಾಲೇಜ್ ಪ್ರಾರಂಭಿಸಲು	` 711.00 ಕೋಟಿ
7.	ಕಾರಾವಿ ನಿಗಮದ ಮಾದರಿ ಆಸ್ಪತ್ರೆ, ರಾಜಾಜಿನಗರ.	` 293.00